# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.</u>

## <u>ಸಿ.ಸಿ.ನಂ.**27/2024**</u>

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲಿಸ ಠಾಣೆ

ಫಿರ್ಯಾದಿ

ವಿರುದ್ಧ

1) ಸುರೇಶ ತಂದೆ ರಾಮು ಖಿಲಾರಿ,
ವಯಾಃ 32 ವರ್ಷ ಉದ್ಯೋಗಃ ಒಕ್ಕಲುತನ,
ಸಾಃ ಕಲಬೀಳಗಿ, ತಾಃ ಜಮಖಂಡಿ.

2) ರಾಮು ತಂದೆ ಸಿದ್ದಪ್ಪ ಖಿಲಾರಿ,
ವಯಾಃ 50 ವರ್ಷ ಉದ್ಯೋಗಃ ಒಕ್ಕಲುತನ,
ಸಾಃ ಕಲಬೀಳಗಿ, ತಾಃ ಜಮಖಂಡಿ.

ಆರೋಪಿತರು

## <u>ದೋಷಾರೋಪಣೆ</u>

ನಾನು ಶ್ರೀ.ರಾಜಶೇಖರ ಎಸ್. ಹರಸೂರ, ಬಿ.ಎ. ಎಲ್.ಎಲ್.ಬಿ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಜಮಖಂಡಿ, ಈ ಮೇಲೆ ನಮೂದಿಸಿದ ಆರೋಪಿತರಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ದೋಷಾರೋಪಣೆ ಇರುತ್ತದೆ ಎಂದು ತಿಳಿಸುತ್ತಿದ್ದೇನೆಃ

1. ಚಾಸಾ-1 ಮತ್ತು ಆರೋಪಿತರಾದ ನೀವು, ನಿಮ್ಮ ಜಮೀನುಗಳ ದಾರಿಯ ಕುರಿತು ತಕರಾರು ಮಾಡಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ದಿನಾಂಕ 28-04-2023 ರಂದು ಸಾಯಂಕಾಲ 18-30 ಗಂಟೆಗೆ ಕಲಬೀಳಗಿ ಗ್ರಾಮದಲ್ಲಿರುವ ಖಿಲಾರಿ ವಸತಿಯ ಲಕ್ಷ್ಮಣ ಜಾಯಪ್ಪ ಖಿಲಾರಿ ಇವರ ಮನೆಯ ಮುಂದಿನ ಅಂಗಳದಲ್ಲಿ, ಚಾಸಾ-1 ಬಸಪ್ಪ ಖಿಲಾರಿ ಇವರ ಮನೆಯ ಮುಂದೆ, ಚಾಸಾ-1 ಮತ್ತು ಆರೋಪಿತರಾದ ನೀವು ಸಾಕಿರುವ ನಾಯಿಗಳು ಕಚ್ಚಾಡುತ್ತಿರುವಾಗ, ಆರೋಪಿತರಾದ ನೀವು ಚಾಸಾ-1 ಮತ್ತು ಅವರ ಮಗ ಪರಶುರಾಮ ಇವರ ಜೊತೆ ಜಗಳ ತೆಗೆದು, ನೀವಿಬ್ಬರೂ ಸೇರಿ ಕೈಯಿಂದ ಪರಶುರಾಮ ಇವರ ಮೈಗೆ ಹೊಡೆಬಡೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ಮತ್ತು ಅವರ ಮಗ ಪರಶುರಾಮ ಇವರೊಂದಿಗೆ ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ-4 ಮನೋಹರ ಖಿಲಾರಿ ಇವರಿಗೆ 1 ನೇ ಆರೋಪಿಯಾದ ನೀವು ಅಪಾಯಕಾರಿ ಆಯುಧವಾದ ಕೊಡಲಿ ತುಮಾರಿನಿಂದ ಅವರ ತಲೆ, ಬೆನ್ನು ಮತ್ತು ಕುತ್ತಿಗೆ ಹತ್ತಿರ ಹೊಡೆದು, ತೀವ್ರ ಸ್ವರೂಪದ ಗಾಯಪೆಟ್ಟುಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.326 ಸಹವಾಚಕ ಕಲಂ.34

ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ಮತ್ತು ಅವರ ಮಗ ಪರಶುರಾಮ ಇವರಿಗೆ ಉದ್ದೇಶಪೂರ್ವಕವಾಗಿ ಅವಮಾನಪಡಿಸಿ, ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

4. ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ಬಸಪ್ಪ ಮತ್ತು ಅವರ ಮಗ ಪರಶುರಾಮ ಇವರಿಗೆ, ನೀವು ಒಬ್ಬೊಬ್ಬರೇ ಸಿಕ್ಕರೆ ನಿಮ್ಮನ್ನು ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ.

ಈ ಮೇಲೆ ವಿವರಿಸಿದ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞೇಯತೆಗೆ ಒಳಪಟ್ಟಿರುತ್ತದೆ. ಆರೋಪವನ್ನು ರಚಿಸಿ, ಆರೋಪಿತರಿಗೆ ಓದಿ, ತಿಳಿಸಿ ಹೇಳಿ ಅರ್ಥಪಡಿಸಿದ ನಂತರ ಅವರ ಹೇಳಿಕೆಗಳನ್ನು ಈ ದೋಷಾರೋಪಣೆಯೊಂದಿಗೆ ಲಗತ್ತಿಸಿದ ಹಾಳೆಯಲ್ಲಿ ಬರೆದುಕೊಳ್ಳಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.23 14:56:27 +0530

ಸ್ಥಳಃ- ಜಮಖಂಡಿ.
ದಿನಾಂಕಃ 22.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ.

## ಸಿ.ಸಿ.ನಂ.**27/2024**

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ

ಫಿರ್ಯಾದಿ

ವಿರುದ್ಧ

ಎ-1) ಸುರೇಶ ತಂದೆ ರಾಮು ಖಿಲಾರಿ,
ವಯಾಃ 32 ವರ್ಷ ಉದ್ಯೋಗಃ ಒಕ್ಕಲುತನ,
ಸಾಃ ಕಲಬೀಳಗಿ, ತಾಃ ಜಮಖಂಡಿ.

ಆರೋಪಿ

## ಆಪಾದನೆ

ಪ್ರಶ್ನೆ 1) ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರಃ ತಿಳಿಯಿತು.

ಪ್ರಶ್ನೆ 2) ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ ? ಅಥವಾ ವಿಚಾರಣೆಯಾಗ ಬಯಸುವಿರೋ ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನುಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆ ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ಧೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR Digitally signed by RAJASHEKHAR Date: 2025.12.23 14:56:33 +0530

ಸ್ಥಳಃ ಜಮಖಂಡಿ.
ದಿನಾಂಕಃ 22.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ.</u>

<u>ಸಿ.ಸಿ.ನಂ.**27/2024**</u>

1) ಕರ್ನಾಟಕ ಸರ್ಕಾರ
ಸಾವಳಗಿ ಪೋಲೀಸ ಠಾಣೆ

ಫಿರ್ಯಾದಿ

ವಿರುದ್ಧ

ಎ-2) ರಾಮು ತಂದೆ ಸಿದ್ದಪ್ಪ ಖಿಲಾರಿ,
ವಯಾಃ 50 ವರ್ಷ ಉದ್ಯೋಗಃ ಒಕ್ಕಲುತನ,
ಸಾಃ ಕಲಬೀಳಗಿ, ತಾಃ ಜಮಖಂಡಿ.

ಆರೋಪಿ

<u>ಆಪಾದನೆ</u>

ಪ್ರಶ್ನೆ 1) ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರಃ ತಿಳಿಯಿತು.

ಪ್ರಶ್ನೆ 2) ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ ? ಅಥವಾ ವಿಚಾರಣೆಯಾಗ ಬಯಸುವಿರೋ ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಆತನ ಹೇಳಿಕೆಯನ್ನುಯಥಾವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆ ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ಧೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR
Digitally signed by RAJASHEKHAR
Date: 2025.12.23 14:56:21 +0530

ಸ್ಥಳಃ ಜಮಖಂಡಿ.
ದಿನಾಂಕಃ 22.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.